JANUARY 07, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಹ್ಯುಮನ್ ಮೆಟಾನ್ಯುಮೋ ವೈರಸ್, ಎರಡು ಪ್ರಕರಣಗಳು ಬೆಂಗಳೂರಿನಲ್ಲಿ ಪತ್ತೆ; ಆತಂಕ ಬೇಡ, ಮುಂಜಾಗ್ರತೆ ಇರಲಿ – ಮುಖ್ಯಮಂತ್ರಿ.
- ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ, ರಾಜ್ಯ ಸಮಿತಿ ಅಧ್ಯಕ್ಷರಿಂದ, ಶುಚಿ ಮಿತ್ರ ಸ್ವಯಂ ಸೇವಕರ ನೇಮಕಕ್ಕೆ, ಸೂಚನೆ.
- ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಇಂದು, ರಾಜ್ಯಕ್ಕೆ ಭೇಟಿ; ಧರ್ಮಸ್ಥಳದಲ್ಲಿ 'ಶ್ರೀ ಸಾನಿಧ್ಯ' ಲೋಕಾರ್ಪಣೆ.
- ಆಕಾಶವಾಣಿ ಧಾರವಾಡ ಕೇಂದ್ರಕ್ಕೆ 75 ವರ್ಷ; ನಾಳೆ ಅಮೃತ ಮಹೋತ್ಸವ ಸಂಭ್ರಮ.

<><><>

ಈಗ ವಾರ್ತೆಗಳ ವಿವರ

<><><>

ಚೈನಾದಲ್ಲಿ ಕಾಣಿಸಿಕೊಂಡಿರುವ ಎಚ್.ಎಂ.ಪಿ.ವಿ. ಸೋಂಕು ರಾಜ್ಯದ ಎರಡು ಮಕ್ಕಳಲ್ಲಿ ಕಾಣಿಸಿಕೊಂಡಿದ್ದು, ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಹೇಳಿದ್ದಾರೆ. ಸೋಂಕು ಹರಡದಂತೆ ತಡೆಗಟ್ಟಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು. ಆತಂಕ ಬೇಡ, ಮುಂಜಾಗ್ರತೆ ಇರಲಿ ಎಂದರು.

<><><>

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ್ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ, ಬೆಂಗಳೂರಿನಲ್ಲಿ ಸಭೆ ನಡೆಸಿ, ಪರಿಸ್ಥಿತಿ ಅವಲೋಕಿಸಿದರು. ಎಚ್.ಎಂ.ಪಿ.ವಿ. ವೈರಸ್ ಬಗ್ಗೆ ಆತಂಕಪಡುವ ಅಗತ್ಯವಿಲ್ಲ. ಸೋಂಕಿತ ಇಬ್ಬರು ಮಕ್ಕಳು ಗುಣಮುಖರಾಗಿದ್ದು, ಇಂದು ಆಸ್ಪತ್ರೆಯಿಂದ ಬಿಡುಗಡೆಯಾಗುವ ಸಾಧ್ಯತೆ ಇದೆ ಎಂದರು. ಈ ಸೋಂಕು ಶ್ವಾಸಕೋಶಕ್ಕೆ ಸಂಬಂಧಿಸಿದ, ಶೀತ ಮಾದರಿಯದ್ದು. 2001 ರಲ್ಲಿ ನೆದರ್ಲೆಂಡ್‌ನಲ್ಲಿ ಈ ಸೋಂಕು ಮೊದಲು ಕಾಣಿಸಿಕೊಂಡಿತ್ತು. ಈಗ ಚೈನಾದಲ್ಲಿ ಕಾಣಿಸಿಕೊಂಡಿದೆ. ರಾಜ್ಯದಲ್ಲಿ ಸೋಂಕು ತಡೆಯಲು, ಐ.ಸಿ.ಎಂ.ಆರ್. ಸೂಚನೆ ಅನ್ವಯ ಅಗತ್ಯ ಮಾರ್ಗಸೂಚಿಗಳನ್ನು ಕಾಲಕಾಲಕ್ಕೆ ಬಿಡುಗಡೆ ಮಾಡಲಾಗುವುದು ಎಂದರು.

<><><>

ತ್ಯಾಜ್ಯವನ್ನು ಮೂಲದಲ್ಲೇ ವಿಂಗಡಿಸಿ, ಸೂಕ್ತ ರೀತಿಯಲ್ಲಿ ಸಂಗ್ರಹಿಸಿ, ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಅಧಿಕಾರಿಗಳು ಮುಂದಾಗಬೇಕು ಎಂದು, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ, ರಾಜ್ಯ ಸಮಿತಿ ಅಧ್ಯಕ್ಷ, ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ ಸೂಚಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ನಿರೀಕ್ಷಣಾ ಮಂದಿರದಲ್ಲಿ, ಘನ ತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕುರಿತ, ಸಭೆಯಲ್ಲಿ ಅವರು ಮಾತನಾಡಿದರು. ಶುಚಿ ಮಿತ್ರ, ಸ್ವಯಂ ಸೇವಕರನ್ನು ನೇಮಕ ಮಾಡುವಂತೆ ಅವರು, ಜಿಲ್ಲಾಡಳಿತಕ್ಕೆ ಹೇಳಿದರು. ಕೆಲಗೇರಿ ಕೆರೆ ಸ್ವಚ್ಛತೆಗೆ ಆದ್ಯತೆ, ಮಲಿನ ನೀರು ಕೆರೆಗೆ ಸೇರದಂತೆ, ಇಂದೋರ್ ಮಾದರಿಯಲ್ಲಿ ಬದ್ಧತೆ ಮತ್ತು ಸಿದ್ಧತೆಯೊಂದಿಗೆ ಯೋಜಿಸುವಂತೆ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ನಿರ್ದೇಶಿಸಿದರು.

<><><>

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಶೇಕಡ 50 ರಷ್ಟು ಜನರಿಗೆ, ಸಂಸ್ಕರಿಸದ ಕುಡಿಯುವ ನೀರು ಪೂರೈಕೆಯಾಗುತ್ತಿದೆ; ತಜ್ಞರನ್ನು ಒಳಗೊಂಡ ಸತ್ಯ ಶೋಧನಾ ಸಮಿತಿ ವರದಿಯನ್ನು, ಇದೇ 17 ರಂದು, ಮುಖ್ಯಮಂತ್ರಿಯವರಿಗೆ ಸಲ್ಲಿಸುವುದಾಗಿ ವಿಧಾನ ಪರಿಷತ್ ಶಾಸಕ ಐವಾನ್ ಡಿಸೋಜ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ 13 ನದಿಗಳು ಕಲುಷಿತಗೊಂಡಿವೆ. ನೇತ್ರಾವತಿ ನದಿಯೂ ಆ ಪಟ್ಟಿಯಲ್ಲಿದೆ. ಮಂಗಳೂರು ನಗರ ಪಾಲಿಕೆಯ 60 ವಾರ್ಡ್‌ಗಳಿಗೆ ನೀರು ಪೂರೈಸುವ ಜೀವ ನದಿ ಇದಾಗಿದ್ದು, ಪರಿಸ್ಥಿತಿ ಗಂಭೀರವಾಗಿದೆ. ಸಾರ್ವಜನಿಕರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ ಎಂದರು.

<><><>

ಶಿವಮೊಗ್ಗ ಜಿಲ್ಲೆಯಲ್ಲಿ, 8 ಬಾಲ ಕಾರ್ಮಿಕ ಪ್ರಕರಣಗಳು ವರದಿಯಾಗಿದ್ದು, ಆ ಪೈಕಿ 5 ಪ್ರಕರಣಗಳು, ಅನ್ಯ ರಾಜ್ಯದಿಂದ ವಲಸೆ ಬಂದಂತಹ ಪ್ರಕರಣಗಳು ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಶಿವಮೊಗ್ಗದ ನಿರೀಕ್ಷಣಾ ಮಂದಿರದಲ್ಲಿ ಸಚಿವರು, ಸಮಾಲೋಚನಾ ಸಭೆ ನಡೆಸಿದರು. 8 ಬಾಲ ಕಾರ್ಮಿಕ ಪ್ರಕರಣಗಳ ಪೈಕಿ, ಒಂದು ಪ್ರಕರಣ ಮಕ್ಕಳ ಕಲ್ಯಾಣ ಸಮಿತಿ ಮುಂದೆ ವಿಚಾರಣೆ ಹಂತದಲ್ಲಿದೆ. ಇಬ್ಬರು ಬಾಲಕಾರ್ಮಿಕರನ್ನು, ಮುಖ್ಯವಾಹಿನಿಗೆ ತಂದು ಶಿಕ್ಷಣ ಕೊಡಿಸಲಾಗುತ್ತಿದೆ ಎಂದರು.

ಜಿಲ್ಲಾಡಳಿತದ ಅಧಿಕಾರಿಗಳು, ಪ್ರತಿ ಮೂರು ತಿಂಗಳಿಗೊಮ್ಮೆ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಅಭಿಯಾನ ಬಗ್ಗೆ, ಜಾಗ್ರತಿ ಮುಡಿಸುವಂತೆ, ಸಚಿವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

<><><>

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಭೇಟಿ ನೀಡಿ, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ್, ಪೌರ ಕಾರ್ಮಿಕ ಮೂರ್ತಿ ಅವರ ಆರೋಗ್ಯ ವಿಚಾರಿಸಿದರು.

<><><>

ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಇಂದು, ದಕ್ಷಿಣಕನ್ನಡ ಜಿಲ್ಲೆಗೆ ಭೇಟಿ ನೀಡಲಿದ್ದು, ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಭಕ್ತಾದಿಗಳಿಗಾಗಿ ನಿರ್ಮಿಸಿರುವ, ನೂತನ ಸಂಕೀರ್ಣ 'ಶ್ರೀ ಸಾನಿಧ್ಯ'ವನ್ನು, ಇಂದು ಮಧ್ಯಾಹ್ನ 2 ಗಂಟೆಗೆ, ಉಪ ರಾಷ್ಟ್ರಪತಿ ಉದ್ಘಾಟಿಸಲಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಸುಧೇಶ್ ಧನಕರ್, ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ. 'ಶ್ರೀ ಸಾನಿಧ್ಯ' ಅಪರೂಪದ ವಾಸ್ತುಶಿಲ್ಪ ಹೊಂದಿದ ನಿರ್ಮಿತಿ. 2 ಲಕ್ಷ 75 ಸಾವಿರದ 177 ಚದರ ಅಡಿಯ ಕಟ್ಟಡವಾಗಿದ್ದು, ಮೂರು ಮಹಡಿಗಳನ್ನು ಹೊಂದಿದೆ. 16 ಸಭಾಂಗಣಗಳಿವೆ. ಒಟ್ಟು 10 ಸಾವಿರದಿಂದ 12 ಸಾವಿರ ಭಕ್ತಾದಿಗಳನ್ನು, ಏಕಕಾಲದಲ್ಲಿ ನಿರ್ವಹಿಸುವ ಅನುಕೂಲತೆ ಕಲ್ಪಿಸಲಾಗಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಜನವರಿ 8, 1950 ಧಾರವಾಡ ಆಕಾಶವಾಣಿ ತನ್ನ ಸಾರ್ವಜನಿಕ ಪ್ರಸಾರ ಸೇವೆ ಆರಂಭಿಸಿದ ಸುದಿನ. ನಾಳೆಗೆ 75 ವರ್ಷಗಳನ್ನು ಪೂರೈಸಿ ತನ್ನ, ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳಲಿದೆ. 'ಬಹು ಜನ ಸುಖಾಯ, ಬಹು ಜನ ಹಿತಾಯ' ಧ್ಯೇಯದೊಂದಿಗೆ, ಅಂದಿನ ಕೇಂದ್ರ ಸಚಿವರಾಗಿದ್ದ ಆರ್.ಆರ್. ದಿವಾಕರ ಅವರಿಂದ, ಆಕಾಶವಾಣಿ ಧಾರವಾಡ ಕೇಂದ್ರ ಲೋಕಾರ್ಪಣೆಗೊಂಡಿತ್ತು. ಪಂಡಿತ ಮಲ್ಲಿಕಾರ್ಜುನ ಮನ್ಸೂರ, ಪಂಡಿತ ಭೀಮಸೇನ ಜೋಶಿ, ವಿದುಷಿ ಗಂಗೂಬಾಯಿ ಹಾನಗಲ್ ಹಾಗೂ ವರಕವಿ ದ.ರಾ.ಬೇಂದ್ರೆ ವಂದೇ ಮಾತರಂ ಹಾಡಿದ್ದು ವಿಶೇಷ.

<><><>

ಧಾರವಾಡ ಆಕಾಶವಾಣಿಯ ಕಾರ್ಯಕ್ರಮ ಮುಖ್ಯಸ್ಥ ಶರಣ ಬಸವ ಚೋಳಿನ ಅವರು, ಪ್ರದೇಶ ಸಮಾಚಾರಕ್ಕಾಗಿ, ಅಮೃತ ಮಹೋತ್ಸವದ ವಿಶೇಷತೆ ವಿವರಿಸಿದ್ದಾರೆ.

<><><>

ಶರಣಬಸವ ಚೋಳಿನ ಧ್ವನಿ 65 ಸೆಕೆಂದುಗಳು

<><><>

ಧಾರವಾಡ ಆಕಾಶವಾಣಿಯ, ಅತ್ಯುನ್ನತ ಶ್ರೇಣಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯಕರಾದ, ಪದ್ಮಶ್ರೀ ಪಂಡಿತ ಎಂ. ವೆಂಕಟೇಶಕುಮಾರ, ಅಮೃತ ಮಹೋತ್ಸವದ ಸಂದರ್ಭದಲ್ಲಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪಂಡಿತ ಎಂ. ವೆಂಕಟೇಶ ಕುಮಾರ ಧ್ವನಿ 60 ಸೆಕೆಂದುಗಳು

<><><>

ಶಿಕ್ಷಣ ತಜ್ಞ ಗಾಂಧೀವಾದಿ, ಎಚ್.ಎನ್. ಖ್ಯಾತಿಯ, ಪ್ರೊಫೆಸರ್ ಎಚ್.ನರಸಿಂಹಯ್ಯ ಅವರು ಓದಿದ, ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು ಹೊಸೂರು ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ, ಈಗ ಶತಮಾನೋತ್ಸವ ಸಂಭ್ರಮ. ಈ ತಿಂಗಳ 31 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. 'ಹೋರಾಟದ ಹಾದಿ'ಯ ಪದ್ಮ ಭೂಷಣ ಡಾಕ್ಟರ್ ಎಚ್.ನರಸಿಂಹಯ್ಯ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಗೊಂಡ ಈ ಶಾಲೆಯಲ್ಲಿ ಓದಿದ್ದು, ವಿಶೇಷ ಸ್ಮರಣ ಸಂಚಿಕೆ ಸಹ ಬಿಡುಗಡೆಯಾಗಲಿದೆ. ಹೊಸೂರು ಗ್ರಾಮದಲ್ಲಿ ಹಬ್ಬದ ವಾತಾವರಣ ಮನೆ ಮಾಡಿದೆ.

<><><>

ಸಜ್ಜನ ಹಾಗೂ ಸೃಜನ ಸಾಹಿತಿ, ನಾ. ಡಿಸೋಜ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಇಂದು ಸಂಜೆ ನಾಲ್ಕು ಗಂಟೆಗೆ, ಅವರ ಹುಟ್ಟೂರು, ಶಿವಮೊಗ್ಗ ಜಿಲ್ಲೆ ಸಾಗರದ ಸಂತ ಜೋಸೆಫ್ ಚರ್ಚ್‌ನ ಪಕ್ಕದ ಶಾಂತಿ ಜರುಗಲಿದೆ. ಕನ್ನಡ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳ ಕೃತಿ ರಚನೆಯಲ್ಲಿ, ಪ್ರಖ್ಯಾತಿ ಪಡೆದಿದ್ದ, ಖ್ಯಾತ ಹಿರಿಯ ಸಾಹಿತಿ, ನಾ.ಡಿಸೋಜ ಅವರ ನಿಧನದಿಂದ, ಕನ್ನಡ ಸಾರಸ್ವತ ಲೋಕಕ್ಕೆ ತುಂಬಿಬಾರದ ಹಾನಿಯಾಗಿದೆ ಎಂದು, ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರು, ಮಂಡ್ಯ ಜಿಲ್ಲಾಧಿಕಾರಿ ಕುಮಾರ ಅವರಿಗೆ, ಪತ್ರ ಬರೆದು, ಅಭಿನಂದಿಸಿ, ಕೃತಜ್ಞತೆ ಸೂಚಿಸಿದ್ದಾರೆ. (07)

ಚಿಕ್ಕಮಗಳೂರಿನಲ್ಲಿ ಆರು ಜನ ನಕ್ಸಲರು, ಶರಣಾಗತರಾಗುವ ಬಗ್ಗೆ, ಸರ್ಕಾರದಿಂದ ಯಾವುದೇ ಅಧಿಕೃತ ಮಾಹಿತಿ ಬಂದಿಲ್ಲ ಎಂದು, ಜಿಲ್ಲಾಧಿಕಾರಿ ಮೀನಾ ನಾಗರಾಜ ಸ್ಪಷ್ಟ ಪಡಿಸಿದ್ದಾರೆ. (07)

ಅರಣ್ಯ ಮತ್ತು ವನ್ಯಜೀವಿ ಅಪರಾಧಗಳ ದಾಖಲೆಗೆ, "ಗರುಡಾಕ್ಷಿ" ಆನ್ ಲೈನ್ ಎಫ್.ಐ.ಆರ್. ವ್ಯವಸ್ಥೆಗೆ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಇಂದು ಚಾಲನೆ ನೀಡಲಿದ್ದಾರೆ.

ರಾಯಚೂರಿನ ಐತಿಹಾಸಿಕ ಮಾವಿನ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್.ಬೋಸರಾಜು, ಪರಿಶೀಲಿಸಿದರು. (06)

ಕೊಪ್ಪಳ ಜಿಲ್ಲೆ, ಯಲಬುರ್ಗಾದ ಅಡೂರಿನ, ಬಾಣಂತಿಯರ ಸಾವು ಪ್ರಕರಣದ ಹಿನ್ನೆಲೆ, ಬಿಜೆಪಿ ಸತ್ಯ ಶೋಧನಾ ಸಮಿತಿ ಭೇಟಿ ನೀಡಿ, ಸಾಂತ್ವನ ಹೇಳಿತು. (08)

ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ವಿಶೇಷಚೇತನರು ಹಾಗೂ ಹಿರಿಯ ನಾಗರಿಕರಿಗೆ, ಉಡುಪಿಯಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಸಲಕರಣೆ ವಿತರಿಸಿದರು. (08)

ಯಾದಗಿರಿ ಜಿಲ್ಲೆಯಲ್ಲಿ, ಈ ತಿಂಗಳ 31ರ ವರೆಗೆ, ಪಡಿತರ ಚೀಟಿ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಆಹಾರ ಇಲಾಖೆ ಉಪ ನಿರ್ದೇಶಕ ಅನಿಲಕುಮಾರ ಧವಳಗಿ ತಿಳಿಸಿದ್ದಾರೆ. (04)

"ನನ್ನ ಬೆಳೆ ನನ್ನ ಹಕ್ಕು" ಧ್ಯೇಯದೊಂದಿಗೆ, ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಳೆದ ಡಿಸೆಂಬರ್ 29ರಿಂದ ಆರಂಭಗೊಂಡಿದೆ. ರೈತರು ಸ್ವತಃ ತಮ್ಮ ಬೆಳೆ ವಿವರಗಳನ್ನು, ಆನ್ಲೈನ್ ಆಪ್‌ನಲ್ಲಿ ದಾಖಲಿಸಬೇಕಿದೆ.

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯಲಿರುವ, ಮಹಾ ಕುಂಭಮೇಳಕ್ಕೆ, ಈ ತಿಂಗಳ 13 ರಿಂದ ಫೆಬ್ರವರಿ 26ರ ವರೆಗೆ ಯಾತ್ರಾರ್ಥಿಗಳಿಗಾಗಿ, ಭಾರತೀಯ ರೇಲ್ವೆ, 13 ಸಾವಿರ ವಿಶೇಷ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿದೆ.

2024 ರ ಕಾರ್ಮಿಕ ಕಲ್ಯಾಣ ನಿಧಿ ವಂತಿಕೆಯನ್ನು, ಈ ತಿಂಗಳ 15 ರೊಳಗೆ ಕಡ್ಡಾಯವಾಗಿ ಪಾವತಿಸುವಂತೆ, ವಿಜಯನಗರ ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡಂಬೂರು ಮತ್ತೂರು ತಿಳಿಸಿದ್ದಾರೆ. (10)

ಮೈಸೂರಿನ ಕರ್ನಾಟಕ ಕಲಾ ಮಂದಿರದಲ್ಲಿ, ಇದೇ 14 ರಿಂದ ಆರು ದಿನಗಳ ರಾಷ್ಟ್ರೀಯ ಬಹುರೂಪಿ ನಾಟಕೋತ್ಸವ ಆಯೋಜಿತವಾಗಿದೆ ಎಂದು, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ತಿಳಿಸಿದ್ದಾರೆ. (04)

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆ ಅಡಿ, ದಾವಣಗೆರೆ ಜಿಲ್ಲೆಯ 9 ಸಾವಿರದ 700 ಸ್ವ ಸಹಾಯ ಸಂಘಗಳಿಗೆ, 11 ಕೋಟಿ 80 ಲಕ್ಷ ರೂಪಾಯಿ ಸಮುದಾಯ ಬಂಡವಾಳ ನಿಧಿ ನೀಡಲಾಗಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಸುರೇಶ್ ಇಟ್ನಾಳ್ ತಿಳಿಸಿದ್ದಾರೆ. (05)

2024 ರಲ್ಲಿ ಪದವಿ, ಡಿಪ್ಲೊಮಾ ತೇರ್ಗಡೆಯಾಗಿ, 180 ದಿನ ಉದ್ಯೋಗಾಕಾಂಕ್ಷಿಗಳಾಗಿ ಉಳಿದ ಅಭ್ಯರ್ಥಿಗಳು, ಯುವನಿಧಿ ಯೋಜನೆಗೆ, **sevasindhu gs.karnataka.gov.in** ಮೂಲಕ ಅರ್ಜಿ ಸಲ್ಲಿಸಬಹುದು.

ಕೇಂದ್ರದ ಜಲ ಜೀವನ್ ಮಿಷನ್ ಯೋಜನೆ ಅಡಿ, ಚಿಕ್ಕಬಳ್ಳಾಪುರ ಜಿಲ್ಲೆಯ ಸಾವಿರದ 640 ಗ್ರಾಮಗಳಿಗೆ, ಶುದ್ಧ ಕುಡಿಯುವ ನೀರು ಪೂರೈಸಲು, 983 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. (07)

ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾದೆಮಿ, **"Exploring Nature's Pharmacy: Potential of Medicinal and Aromatic Plants and Their Conservation"** ವಿಷಯ ಕುರಿತು, ಈ ತಿಂಗಳ 7 ರಿಂದ 9ರ ವರೆಗೆ, ರಾಷ್ಟ್ರೀಯ ಸಮ್ಮೇಳನ ಆಯೋಜಿಸಿದೆ.

ಹರ್ಷ/ಉಮೇಶ/ಕ.ವಾ.ಇ. ಜಿಲ್ಲಾವಾರು/ಎಕ್ಸ್ ಖಾತೆ/ಪಿಟಿಸಿ ಜಿಲ್ಲಾವಾರು/ಪ್ರಕಟಣೆಗಳು

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಹ್ಯುಮನ್ ಮೆಟಾನ್ಯುಮೋ ವೈರಸ್, ಎರಡು ಪ್ರಕರಣಗಳು ಬೆಂಗಳೂರಿನಲ್ಲಿ ಪತ್ತೆ; ಆತಂಕ ಬೇಡ, ಮುಂಜಾಗ್ರತೆ ಇರಲಿ – ಮುಖ್ಯಮಂತ್ರಿ.

- ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ, ರಾಜ್ಯ ಸಮಿತಿ ಅಧ್ಯಕ್ಷರಿಂದ, ಶುಚಿ ಮಿತ್ರ ಸ್ವಯಂ ಸೇವಕರ ನೇಮಕಕ್ಕೆ, ಸೂಚನೆ.

- ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಇಂದು, ರಾಜ್ಯಕ್ಕೆ ಭೇಟಿ; ಧರ್ಮಸ್ಥಳದಲ್ಲಿ 'ಶ್ರೀ ಸಾನಿಧ್ಯ' ಲೋಕಾರ್ಪಣೆ.
- ಆಕಾಶವಾಣಿ ಧಾರವಾಡ ಕೇಂದ್ರಕ್ಕೆ 75 ವರ್ಷ; ನಾಳೆ ಅಮೃತ ಮಹೋತ್ಸವ ಸಂಭ್ರಮ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ